ಓ ಎಸ್ ನಂ.**655/2014**

ಪಿ ಡಬ್ಲ್ಯೂ-**1**

**ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ದಿನಾಂಕಃ **04-02-2020.**

ಪಾಟೀ ಸವಾಲು ಃ- **1** ನೇ ಪ್ರತಿವಾದಿ ಪರ ಶ್ರೀಮತಿ. ಎಂ ಎಲ್ ವಕೀಲರಿಂದ

ನಾವುಗಳು ಅವಿಭಕ್ತ ಕುಟುಂಬದಲ್ಲಿ ವಾಸವಾಗಿದ್ದೇವೆಂದರೆ ಸರಿಯಲ್ಲ. ನಾನು ಓ ಎಸ್ ನಂ.*6285/2008* ರಲ್ಲಿ ನನ್ನ ಲಿಖಿತ ಹೇಳಿಕೆಯಲ್ಲಿ ಹಿಂದು ಅವಿಭಕ್ತ ಕುಟುಂಬದ ಸ್ವತ್ತು ಮತ್ತು ಪಿತ್ರಾರ್ಜಿತ ಸ್ವತ್ತು ಎಂದು ಹೇಳಿದ್ದು ಅದು ವಿಭಾಗವಾಗಿಲ್ಲ ಎಂದು ಹೇಳಿದ್ದೇನೆಂದರೆ ಸಾಕ್ಷಿಯು ಕೇವಲ ಪಿತ್ರಾರ್ಜಿತ ಸ್ವತ್ತುಗಳು ಎಂದು ಹೇಳಿದ್ದು ಅವಿಭಕ್ತ ಕುಟುಂಬದ ಸ್ವತ್ತುಗಳು ಎಂದು ಹೇಳಿಲ್ಲ. ಈ ದಾವೆಯಲ್ಲಿ ಐಟಂ ನಂ. *1* ರಿಂದ *3* ರ ಸ್ವತ್ತುಗಳು ವಿಭಾಗವಾಗಿರುವ ಸ್ವತ್ತುಗಳು ಎಂದು ಈ ದಾವೆಯಲ್ಲಿ ಹೇಳಿದ್ದೇನೆಂದರೆ ಸರಿಯಲ್ಲ. ದಿನಾಂಕ *4-3-1955* ರಲ್ಲಿ ವಿಭಾಗವಾಗಿದೆ ಎಂದು ಹೇಳಿರುತ್ತೇನೆಂದರೆ ಸರಿ ಸಾಕ್ಷಿಯು ಮುಂದುವರೆದು ಈ ಸ್ವತ್ತುಗಳು ಮೇಲ್ಕಂಡ ವಿಭಾಗದಲ್ಲಿ ಸೇರಿರುವುದಿಲ್ಲ ಎಂದು ನುಡಿಯುತ್ತಾರೆ .

ಜಿ ನರಹರಿ ಎಂಬ ವಕೀಲರು ಭೂ ನ್ಯಾಯಾಧೀಕರಣ ಮಂಡಳಿಯ ಮುಂದೆ ನಮ್ಮ ಪರವಾಗಿ ವಕಾಲತ್ ವಹಿಸಿದ್ದರು ಎಂದರೆ ಸರಿ . ಸದರಿ ನರಹರಿ ಎಂಬುವವರು ತನ್ನ ಸಹ ವಕೀಲರ ಜೊತೆ ಓ ಎಸ್ ನಂ.*6285/2008* ರ ದಾವೆಯಲ್ಲಿ ಆಗ್ರಾ ಲೀಗಲ್ ಎಂಬ ಹೆಸರಿನಲ್ಲಿ ಹಾಜರಾಗಿದ್ದರು ಎಂದರೆ ಸರಿ . ನಾನು ವಾದಿಯ *2* ನೇ ಅಳಿಯನಾಗಿದ್ದು ಈ ದಾವೆಯಲ್ಲಿ ಜಿ ಪಿ ಎ ಹೊಲ್ಡರ್ ಆಗಿರುತ್ತೇನೆಂದರೆ ಸರಿ . ನಾನು ವಾದಿಯ ಮಗಳನ್ನು ದಿನಾಂಕ *15-06-1989* ರಲ್ಲಿ ಮದುವೆಯಾಗಿರುತ್ತೇನೆ .

ಪ್ರತಿವಾದಿಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನದಲ್ಲಿರುವ ದಾವಾ ಸ್ವತ್ತಿಗೆ ತೊಂದರೆ ನೀಡಿದ್ದರಿಂದ ದೂರು ನೀಡಿದ್ದರು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತುಗಳಿಗೆ ತೊಂದರೆ ನೀಡಿದ್ದರಿಂದ ದೂರು ದಾಖಲಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸುಳ್ಳು ದೂರು ಆಗಿರುತ್ತದೆ .ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳು ಬೆಳೆ ಬೆಳೆಯುತ್ತಿದ್ದರು ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.,

(ಎಸ್.ಚಿನ್ನಸ್ವಾಮಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಚನ್ನರಾಯಪಟ್ಟಣ.